ಅ) ೧೨.೨೦ ಲಕ್ಷ ರೂಪಾಯಿಗಳು.

ಇ) ಟೆಂಡರು ಗುತ್ತಿಗೆದಾರರು ಕೆಲಸವನ್ನು ನಿಲ್ಲಿಸಿರುವುದರಿಂದ ಮತ್ತು ಪರಿಷ್ಕೃತ ಅಂದಾಜಿಗೆ ಮಂಜೂರಾತಿ ಬೇಕಾಗಿರುವುದರಿಂದ.

ಈ) ಪರಿಷ್ಕೃತ ಅಂದಾಜಿಗೆ ಮಂಜೂರಾತಿ ನೀಡಿದ ಮೇಲೆ ಕೆಲಸ ಮುಂದುವರೆಸಿ ಪೂರೈಸಲಾಗುವುದು.

ಶ್ರೀ ಬಿ. ಜಿ. ಜವಳಿ.—ಘಟಪ್ರಭಾ ನದಿಗೆ ಕಟ್ಟುವ ಬ್ಯಾರೇಜ್ ಸುಮಾರು ಹನ್ನೊಂದು ವರ್ಷಗಳ ಕಾಲದಿಂದಲೂ ಆಗಲೇ ಇರುವ ಬಗ್ಗೆ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದರ ಬಗ್ಗೆ ಲೋಕೋಪಯೋಗಿ ಮಂತ್ರಿಗಳ ಜೊತೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ರಿವೈಸ್ಡ್ ಎಸ್ಟಿಮೇಟ್ ಮಾಡುವ ಸಲುವಾಗಿ ಸಂಬಂಧಪಟ್ಟ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರ್ ಜೊತೆ ಮಾತನಾಡಿದ್ದೇನೆ. ಅವರು ೩೩ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಎಂದು ಹೇಳಿದರು. ವರ್ಷಾನುಗಟ್ಟಲೆಯಿಂದ ಸಂಬಂಧಪಟ್ಟ ಎಲ್ಲಾ ಚೀಫ್ ಇಂಜಿನಿಯರ್ ಜೊತೆ ಚರ್ಚೆ ಮಾಡಿದರೂ ಈವರೆಗೂ ಎಸ್ಟಿಮೇಟ್ ಬಂದಿಲ್ಲ ಎಂದು ಹೇಳುತ್ತಾರೆ. ಇವರು ಕೆಲಸ ಮಾಡುತ್ತಾರೋ, ಇಲ್ಲವೋ ಗೊತ್ತಿಲ್ಲ. ಈ ಒಂದು ಬ್ಯಾರೇಜ್ ಆಗದೇ ಇದ್ದರೆ ರೈತರ ಪರಿಸ್ಥಿತಿ ಏನಾಗಬೇಕು. ಇದರ ಬಗ್ಗೆ ಅಸಿಸ್ಟೆಂಟ್ ಇಂಜಿನಿಯರ್‌ರವರಿಂದ, ಚೀಫ್ ಇಂಜಿನಿಯರ್‌ರವರಿಗೆ ಮಾತನಾಡಿದ್ದೇನೆ. ಆದ್ದರಿಂದ, ಲೋಕೋಪಯೋಗಿ ಮಂತ್ರಿಗಳು ಸಹಾನುಭೂತಿ ತೋರಿಸಿ ಈ ಕೆಲಸ ಆಗುವ ಹಾಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಅಸಿಸ್ಟೆಂಟ್ ಇಂಜಿನಿಯರ್‌ರವರಿಂದ ಚೀಫ್ ಇಂಜಿನಿಯರ್‌ರವರೆಗೆ ಓಡಾಡಬೇಕಾಗಿಲ್ಲ. ನಾನು ಕರ್ತವ್ಯ ಲೋಪ ಮಾಡುವುದಾದರೆ ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ನಾಲಾಯಕ್ ಆಗುತ್ತೇನೆ. ನಾನು ಎರಡು ಸಾರಿ ತಮ್ಮ ಕಡೆ ಪ್ರವಾಸ ಮಾಡಿದಾಗ ತಮಗೆ ಹೇಳಲಿಕ್ಕೆ ಆಗಿಲ್ಲ. ತಾವು ನಮ್ಮನ್ನು ಸರ್ಕಾರದ ಪ್ರತಿನಿಧಿಯಾಗಿ ಇಟ್ಟಿದ್ದೀರಿ. ನನಗೂ ಸಹ ಅಷ್ಟೇ ಜವಾಬ್ದಾರಿ ಇದೆ. ೧೯೭೫ರಲ್ಲಿ ಮಂಜೂರಾತಿ ಆಗಿದ್ದರೂ ಕೆಲಸ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಘಟಪ್ರಭಾ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ ನೀರನ್ನು ಬಿಟ್ಟಿದ್ದಾರೆ. ಅಲ್ಲಿ ನೀರು ಹರಿಯುತ್ತಿರುವುದರಿಂದ ಈ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಇದು ೩೬ ಲಕ್ಷ ರೂಪಾಯಿಗಳಿಗೆ ಅಂದಾಜು ಆಗಿದೆ, ರಿವೈಸ್ಡ್ ಎಸ್ಟಿಮೇಟ್‌ಗೆ ಮಂಜೂರಾತಿ ಕೊಡುತ್ತಿದ್ದೇವೆ. ಈಗ ಕಂಟ್ರಾಕ್ಟರ್ ಮೇಲೆ ಪೀನಲ್ ಕ್ಲಾಸ್ ಹಾಕಿ ಎನ್‌ಫೋರ್ಸ್ ಮಾಡುತ್ತೇವೆ. ಈ ಕೆಲಸವನ್ನು ಪ್ರಾರಂಭ ಮಾಡಿ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರಶ್ನೆ ೭೧೧ ಸದಸ್ಯರು ಗೈರುಹಾಜರು.

ನೂಲ್ವಿ ಗ್ರಾಮದಿಂದ ಕುರಡಿಕೇರಿ ಗ್ರಾಮದವರೆಗೆ ರಸ್ತೆಯ ನಿರ್ಮಾಣ

೭೧೦. ಶ್ರೀ ಪಿ. ಸಿ. ಸಿದ್ದನಗೌಡ್ರ (ಕಲಘಟಗಿ).— ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಿಂದ ಕುರಡಿಕೇರಿ ಗ್ರಾಮದವರೆಗೆ ಡಾಂಬರ್ ರಸ್ತೆ ಮಾಡುವ ಅವಶ್ಯಕತೆ ಇರುವುದು ಸರಕಾರದವರ ಗಮನದಲ್ಲಿ ಇದೆಯೇ ?

ಆ) ಶೆರೆವಾಡ ಸವಣೂರ ರಸ್ತೆ ವಿಸ್ತರಿಸುವುದು ಹಾಗೂ ಡಾಂಬರ್ ಮಾಡುವುದು ಸರಕಾರದವರ ಗಮನದಲ್ಲಿ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಸದರಿ ರಸ್ತೆಯು ೧೧.೫೫ ಕಿ.ಮಿ. ಉದ್ದವಿದ್ದು, ಗ್ರಾಮಾಂತರ ರಸ್ತೆಯಾಗಿದೆ. ಇದರಲ್ಲಿ ೧.೦ ಕಿ.ಮಿ. ಉದ್ದ ಡಾಂಬರು ರಸ್ತೆಯಾಗಿದೆ. ಉಳಿದ ಭಾಗಕ್ಕೆ ಡಾಂಬರು ಮಾಡಲು ೭೦ ಲಕ್ಷ ರೂಪಾಯಿಗಳಷ್ಟು ಬೇಕಾಗಿದ್ದು, ಇದನ್ನು ಹಣದ ಲಭ್ಯತೆಯನ್ನಾಧರಿಸಿ, ಪರಿಶೀಲಿಸಲಾಗುವುದು.

ಆ) ಈ ರಸ್ತೆಯಂ ೩೮.೫ ಕಿ.ಮಿ. ಉದ್ದವಿದ್ದು ೧೧.೬ ಕಿ.ಮಿ. ಉದ್ದ ಈಗಾಗಲೇ ಡಾಂಬರು ಹಾಕಲಾಗಿದೆ. ೩.೫ ಕಿ.ಮಿ. ಉದ್ದ ರಸ್ತೆಗೆ ಡಾಂಬರಂ ಹಾಕುವ ಕೆಲಸ ಈ ವರ್ಷದ ಆಯವ್ಯಯ ಪತ್ರಿಕೆಯಲ್ಲಿ ೩ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಸೇರಿದೆ. ಬಾಕಿ ಅಭಿವೃದ್ಧಿ ಕೆಲಸಗಳನ್ನು ಹಂತ ಹಂತವಾಗಿ ಹಣದ ಲಭ್ಯತೆಯನ್ನಾಧರಿಸಿ ತೆಗೆದುಕೊಳ್ಳಲಾಗುವುದು.

ಶ್ರೀ ಪಿ. ಸಿ. ಸಿದ್ದನಗೌಡ.— ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಿಂದ ಕುರಹಿಕೇರಿ ಗ್ರಾಮದವರೆಗೆ ಡಾಂಬರ್ ರಸ್ತೆ ಮಾಡಂವುದು ಅಗತ್ಯ ಇದೆ. ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲಿಸುತ್ತೇವೆಂದಂ ಹೇಳುವುದಕ್ಕಿಂತಲೂ ಅರ್ಧ ಭಾಗವಾದರೂ ಮಾಡಿಸುತ್ತೇನೆ ಎಂದಂ ಹೇಳಿದರೆ ಅದು ಭರವಸೆಯಾಗುತ್ತದೆ. ಅದನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಶೆರೆವಾಡ ಸವಣೂರ ರಸ್ತೆಯಂ ಕೆಲಸವನ್ನು ಈ ಸಾರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಇದರ ಬಗ್ಗೆ ಮಾನ್ಯ ಕೆ. ಹೆಚ್. ಪಾಟೀಲರು ಕಂಳಿತುಕೊಂಡೇ ಹೆಚ್ಚು ಆಸ್ಥೆ ವಹಿಸಬೇಕೆಂದಂ ಹೇಳುತ್ತಿದ್ದಾರೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ.

ಧಾರವಾಡ ಜಿಲ್ಲೆಯ ಚಿಕ್ಕ ನೀರಾವರಿ ಯೋಜನೆಗಳ ಬಗ್ಗೆ

೬೮೦ ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಚಿಕ್ಕ ನೀರಾವರಿ ಯೋಜನೆಗಳಿಗೆ (೧೯೮೫–೮೬ ಹಾಗೂ ೧೯೮೬–೮೭) ಮಂಜೂರಾದ ಹಣವೆಷ್ಟು ?

ಆ) ಯೋಜನೆಗಳನ್ನು ನಿಗದಿತ ಸಮಯದಲ್ಲಿ ಕಾರ್ಯಗತಗೊಳಿಸದ್ದರಿಂದ ಮಂಜೂರಾದ ಹಣ ವ್ಯಪಗತಗೊಳ್ಳುವುದಂ ಸರಕಾರದವರ ಗಮನಕ್ಕೆ ಬಂದಿದೆಯೆ ?

ಇ) ರೋಣ ತಾಲೂಕಿನಲ್ಲಿ ಮಂಜೂರಾದ ಚಿಕ್ಕ ನೀರಾವರಿ ಯೋಜನೆಗಳೆಷ್ಟು, ಹಾಗೂ ಮಂಜೂರಾದ ಹಣವೆಷ್ಟು (೧೯೮೫–೮೬ ಹಾಗೂ ೧೯೮೬–೮೭)

ಈ) ಈ ಯೋಜನೆಗಳು ಸಕಾಲದಲ್ಲಿ ಕಾರ್ಯಗತವಾಗಬೇಕಾದರೆ ಪೂರ್ವಭಾವಿಯಾಗಿ ಚಿಕ್ಕನೀರಾವರಿ ಸಂತೋಧನಾ ಘಟಕವನ್ನು ಈ ಮೊದಲು ಇದ್ದಂತೆ ಸ್ಥಾಪಿಸುವ ವಿಚಾರವು ಸರಕಾರಕ್ಕಿದೆಯೇ ?

ಉ) ಹಾಗಿಲ್ಲದಿದ್ದಲ್ಲಿ, ಈ ವಿಳಂಬ ತಪ್ಪಿಸಲು ಸರಕಾರದವರಂ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೫–೮೬ ೩೪೧.೦೫ ಲಕ್ಷ ರೂ.ಗಳು
೧೯೮೬–೮೭ ೩೪೮.೪೦೭ ಲಕ್ಷ ರೂ.ಗಳು

ಆ) ವ್ಯಪಗತವಾಗಿರುವ ಹಣ
೧೯೮೫–೮೬ರಲ್ಲಿ ೦.೯೭ ಲಕ್ಷ ರೂ.ಗಳು
೧೯೮೬–೮೭ರಲ್ಲಿ ಕೆಲಸಗಳು ಪ್ರಗತಿಯಲ್ಲಿವೆ.

ಇ)

ವರ್ಷ	೧೯೮೫–೮೬	೧೯೮೬–೮೭
ಸಣ್ಣ ನೀರಾವರಿ ಯೋಜನೆಗಳು	೨೮	೨೨
ಅನುದಾನ	೧೭.೮೮ ಲಕ್ಷ ರೂ.ಗಳು	೦೨.೩೦ ಲಕ್ಷ ರೂ.ಗಳ

ಈ) ಇಲ್ಲ.

ಉ) ಪ್ರಸಕ್ತ ವ್ಯವಸ್ಥೆ ತೃಪ್ತಿಕರವಾಗಿದೆ.